## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಡಾ. ಸರೋಜಿನಿ ಮಹಿಷಿ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಸಚಿವ ಸಂಪುಟದ ಉಪ ಸಮಿತಿಯನ್ನು ಖಾಯಂ ಆಗಿ ನೇಮಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 27 ಎಸ್‌ಎಲ್‌ಸಿ 89, ದಿನಾಂಕ 16–3–1990

2) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 9 ಎಸ್‌ಎಲ್‌ಸಿ 90, ದಿನಾಂಕ 23–11–1990

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಎಸ್‌ಎಲ್‌ಸಿ 91, ಬೆಂಗಳೂರು, ದಿನಾಂಕ: 30–7–1991**

**ಆದೇಶ**

1. ಕನ್ನಡಿಗರ ಉದ್ಯೋಗ ಸಮಿತಿಯು ಸಲ್ಲಿಸಿರುವ ಮಧ್ಯಕಾಲಿಕ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಲು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾಗಿರುವ ದಿನಾಂಕ 16–3–1990ರ ಸರ್ಕಾರಿ ಆದೇಶದಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿತ್ತು, ಹಾಗೂ ಡಾ: ಸರೋಜಿನಿ ಮಹಿಷಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಆ ಶಿಫಾರಸ್ಸುಗಳ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿ ಮತ್ತು ಅನುಮೋದಿಸಿ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾಗಿರುವ ದಿನಾಂಕ 23–11–1990ರಲ್ಲಿ ಆದೇಶವನ್ನು ಹೊರಡಿಸಿದೆ.

2. ಸಚಿವ ಸಂಪುಟದ ಉಪ ಸಮಿತಿಯು ತನ್ನ ವರದಿಯಲ್ಲಿ ಈ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಸಚಿವ ಸಂಪುಟದ ಉಪ ಸಮಿತಿಯನ್ನು ಖಾಯಂ ಆಗಿ ನೇಮಿಸುವಂತೆ ಮಾಡಿದ ಶಿಫಾರಸ್ಸನ್ನು ಅಂಗೀಕರಿಸಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಗೆ ನಮೂದಿಸಿರುವ ಸಚಿವರುಗಳನ್ನೊಳಗೊಂಡಂತೆ ಸಚಿವ ಸಂಪುಟದ ಉಪ ಸಮಿತಿಯನ್ನು ಖಾಯಂ ಆಗಿ ನೇಮಿಸಲಾಗಿದೆ :–

| | | |
|---|---|---|
| 1. | ಮುಖ್ಯ ಮಂತ್ರಿಗಳು | ಅಧ್ಯಕ್ಷರು |
| 2. | ಕಾರ್ಮಿಕ ಸಚಿವರು | ಸದಸ್ಯರು |
| 3. | ಶಿಕ್ಷಣ ಸಚಿವರು | ಸದಸ್ಯರು |
| 4. | ಸಮಾಜ ಕಲ್ಯಾಣ ಸಚಿವರು | ಸದಸ್ಯರು |
| 5. | ಶ್ರೀ ಅಜೀಜ್ ಸೇಟ್<br>ಸಾರಿಗೆ, ವಕ್ಫ್ ಮತ್ತು ಹಜ್ ಸಮಿತಿ ಸಚಿವರು | ಸದಸ್ಯರು |
| 6. | ಶ್ರೀ ಕೆ.ಜೆ. ಜಾರ್ಜ್<br>ವಸತಿ ಮತ್ತು ನಗರಾಭಿವೃದ್ಧಿ ಸಚಿವರು | ಸದಸ್ಯರು |

3. ಸಚಿವ ಸಂಪುಟದ ಖಾಯಂ ಉಪ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಶಿಫಾರಸ್ಸುಗಳನ್ನು ಪುನರಾವಲೋಕಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ.
**(ಕೆ.ಕೆ. ನಾಡ್‌ಗೀರ್)**
ಸರ್ಕಾರದ ಅಧೀನ ಕಾರ್ಯದರ್ಶಿ–2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).